ಬರುವುದಿಲ್ಲ. ಏಕೆಂದರೆ ನಾನು ಮೊನ್ನೆಯೇ ಹೇಳಿದಂತೆ ಮೂರುವರೆ ಲಕ್ಷ ರೂ. ವೆಚ್ಚದ ಐವತ್ತು ಕೆ.ವಿ. ಜನರೇಟರ್ ವರ್ಕ್ಸ್ ಆಗದೇ ಇರುವುದರಿಂದ ಯಾರೂ ಅಲ್ಲಿಗೆ ಬರುತ್ತಿಲ್ಲ. ಅಲ್ಲಿ ಯಾವುದೇ ಆಪರೇಶನ್ ಮಾಡುತ್ತಿಲ್ಲವೆಂದು ಬರುತ್ತಿಲ್ಲ. ಸಾಮಾನ್ಯವಾಗಿ ಗತಿಗೆಟ್ಟ ಜನತೇ ಆ ಆಸ್ಪತ್ರೆಗೆ ಬರುತ್ತಿದ್ದಾರೆ. ಅಂಥವರಿಗೆ ಊಟದ ವ್ಯವಸ್ಥೆಯನ್ನು ನಿಲ್ಲಿಸಿದ ಕಾರಣ ಅವರಿಗೆ ಬಹಳ ತೊಂದರೆಯಾಗಿದೆ. ದಯಮಾಡಿ ಸರ್ಕಾರ ಕೂಡಲೇ ಊಟದ ವ್ಯವಸ್ಥೆ ಮಾಡಿಸಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕೆ. ಪ್ರಭಾಕರ ಬಂಗೇರ(ಬೆಳ್ತಂಗಡಿ) : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಕಡೆಗಳಲ್ಲಿಯೂ ಕೂಡ ಜಿಲ್ಲಾ ಪಂಚಾಯತ್‌ನಿಂದ ಹಣ ಪೂರೈಕೆ ಆಗದೇ ಇರುವುದರಿಂದ ಅಲ್ಲಿಯೂ ಕೂಡ ಊಟದ ವ್ಯವಸ್ಥೆ ಇಲ್ಲದಾಗಿದೆ. ಇದು ಪುತ್ತೂರಿನ ಸಮಸ್ಯೆ ಒಂದೇ ಅಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಊಟದ ವ್ಯವಸ್ಥೆ ಇಲ್ಲದಾಗಿದೆ. ಆದಕಾರಣ ಅಲ್ಲಿ ಊಟದ ವ್ಯವಸ್ಥೆ ಮಾಡಬೇಕೆಂದು ಈ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಬಿ. ನಾಗರಾಜ್ ಶೆಟ್ಟಿ(ಬಂಟ್ವಾಳ) : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿರುವಂಥ ಎಲ್ಲಾ ಸರ್ಕಾರಿ ಆಸ್ಪತೆಗಳಲ್ಲಿ ಊಟದ ವ್ಯವಸ್ಥೆಯಲ್ಲಿ ಅವ್ಯವಸ್ಥೆಯಾಗಿದೆ. ಸರ್ಕಾರ ಅದರ ಬಗ್ಗೆ ಕೂಡಲೇ ಗಮನ ಕೊಡಬೇಕೆಂದು ಒತ್ತಾಯ ಮಾಡುತ್ತಿದ್ದೇವೆ.

ಶ್ರೀ ಎಂ.ಪಿ. ಪ್ರಕಾಶ್(ಕಂದಾಯ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಸರ್ಕಾರಿ ಆಸ್ಪತ್ರೆಗಳಲ್ಲಿ ಇರುವಂಥ ರೋಗಿಗಳಿಗೆ ಊಟದ ವ್ಯವಸ್ಥೆಯನ್ನು ನಿಲ್ಲಿಸಿರತಕ್ಕಂಥದ್ದು ಅಕ್ಷಮ್ಯ ಅಪರಾಧ. ಪ್ರಾಯಶಃ ಹಣ ಇಲ್ಲದೇ ಜಿಲ್ಲಾ ಪಂಚಾಯತ್‌ನವರು ಈ ರೀತಿ ಮಾಡಿದ್ದಾರೆ ಎಂದು ಅವರು ಹೇಳಿದ್ದಾರೆ. ನನಗೆ ಈ ಬಗ್ಗೆ ತಕ್ಷಣದಲ್ಲಿ ಉತ್ತರಿಸಲು ಮಾಹಿತಿ ಇಲ್ಲದಾಗಿದೆ. ಆ ಕಾರಣಕ್ಕಾಗಿ ನಾನು ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಅವರು ಪ್ರಸ್ತಾಪ ಮಾಡಿದ ಜಮಖಂಡಿ ಕ್ಷೇತ್ರ ಹಾಗೂ ಮೊದಲಾದ ಕಡೆಗೆ ನಾನು ಆರೋಗ್ಯ ಇಲಾಖೆಯ ನಿರ್ದೇಶಕರಿಗೆ ಈ ಕೂಡಲೇ ನಿರ್ದೇಶನ ಕೊಟ್ಟು ಗಮನ ಸೆಳೆಯುತ್ತೇನೆ. ಈ ವಿಚಾರದ ಬಗ್ಗೆ ಮಾಹಿತಿಯನ್ನು ಪಡೆದು, ಒಂದು ವೇಳೆ ಹಣ ಇಲ್ಲದ ಕಾರಣಕ್ಕಾಗಿಯೇ ಊಟದ ವ್ಯವಸ್ಥೆ ನಿಂತಿದ್ದರೆ ಅದಕ್ಕೆ ಪರ್ಯಾಯಾವಾದಂಥ ವ್ಯವಸ್ಥೆಯನ್ನೂ ಕೂಡ ಮಾಡಬೇಕು ಎಂದು ಅವರಿಗೆ ಸರ್ಕಾರ ಸೂಚನೆಯನ್ನು ಕೊಡುತ್ತದೆ.

(xi) ವಿಷಯ : ಫೈನಾನ್ಸ್ ಕಂಪನಿಗಳಲ್ಲಿರುವ ಠೇವಣಿದಾರರ ಬಗ್ಗೆ

† **ಶ್ರೀ ಎನ್, ಯೋಗೀಶ್‌ಭಟ್(ಮಂಗಳೂರು)** : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆ ಮಾತ್ರವಲ್ಲ, ಇಡೀ ರಾಜ್ಯಾದ್ಯಂತ ಇವೊತ್ತು ಲಕ್ಷಾಂತರ ಮಂದಿ ಈ ಫೈನಾನ್ಸ್ ಕಂಪನಿಗಳಲ್ಲಿ ಯಾರು ಠೇವಣಾತಿಗಳನ್ನು ಇಟ್ಟುಕೊಂಡಿದ್ದಾರೆ ಅವರಿಗೆ ಬಡ್ಡಿ ಇರಲಿ, ಅಸಲು ಹಣವೇ ಸಿಗುತ್ತಿಲ್ಲ. ಹೀಗಾಗಿ ಇವರುಗಳು ಅತ್ಯಂತ

ಅಸಹಾಯಕ ಸ್ಥಿತಿಯಲ್ಲಿ ನರಳುತ್ತಿದ್ದಾರೆ. ಒಂದು ಕಡೆ ತಮ್ಮ ನಿವೃತ್ತಿಯ ನಂತರದ ಜೀವನಕ್ಕೆ ನೆರವಾಗಬಹುದು ಎಂದು ಆಕರ್ಷಕ ಬಡ್ಡಿಯ ದರಕ್ಕೆ ಎಲ್ಲಿ ಠೇವಣಾತಿಗಳನ್ನು ಇಟ್ಟುಕೊಂಡಿದ್ದಾರೋ, ಅದು ಮಣಿಪಾಲ್ ಫೈನಾನ್ಸ್, ಮಹಾರಾಷ್ಟ್ರ ಅಪೆಕ್ಸ್ ಬ್ಯಾಂಕ್ ಇರಬಹುದು. ಅಥವಾ ಈರೋಡ್‌ನಂಥ ಸಂಸ್ಥೆಗೆ ಸಂಬಂಧ ಪಟ್ಟಂಥವುಗಳಿರಬಹುದು. ಅಥವಾ ಬೇರೆ ವಿಜಯಾ ಲೀಸಿಂಗ್‌ನಂಥ ಕಂಪನಿಗಳೇ ಇರಬಹುದು, ಅಂಥ ಅನೇಕ ಕಂಪನಿಗಳಲ್ಲಿ ಹಣ ಇಟ್ಟಿರುವಂಥವರ ಸ್ಥಿತಿ ಇಂದು ದಾರುಣವಾಗಿದೆ. ಮೊನ್ನೆ ತಾನೇ ಎರಡು ಸಭೆಗಳು ನಡೆಯಿತು. ಇದರಲ್ಲಿ ಒಂದು ಸಭೆ ಮಿಲಾಗ್ರಿಸ್ ಚರ್ಚ್ ಪಕ್ಕದಲ್ಲಿ ನಡೆಯಿತು. ಅದೇ ರೀತಿಯಲ್ಲಿ ಮಂಗಳೂರಿನಲ್ಲಿರುವ ಒಂದು ಹೋಟೆಲ್ ಪಕ್ಕದಲ್ಲಿ ಇರುವಂಥ ಸ್ಥಳದಲ್ಲಿ ಒಂದು ದೊಡ್ಡ ಸಭೆ ನಡೆಯಿತು. ಆ ಸಭೆಯಲ್ಲಿ ಸಹಸ್ರಾರ್ ಮಂದಿ ಭಾಗವಹಿಸಿದ್ದರು. ಬಂದವರಲ್ಲಿ ಹೆಚ್ಚಿನವರು 60:65 ವರ್ಷಕ್ಕೂ ಮೀರಿದವರೇ ಇದ್ದರು. ಒಬ್ಬೊಬ್ಬರದ್ದೂ ಒಂದೊಂದು ಕಥೆ. ಅವರ ಬವಣೆ ಹೇಗಿತ್ತೆಂದರೆ ಒಬ್ಬರಿಗೆ ತಮ್ಮ ಮಗಳ ಮದುವೆ ನಿಶ್ಚಯವಾಗಿದೆ. ಮೂರು ತಿಂಗಳೊಳಗೆ ಎಲ್ಲಾ ವ್ಯವಸ್ಥೆಯನ್ನು ಮಾಡಬೇಕಾಗಿದೆ. ಬಡ್ಡಿ ಇಲ್ಲದಿದ್ದರೂ ಪರವಾಗಿಲ್ಲ ಅಸಲು ಹಣವನ್ನು ಕೊಡಿಸುವ ವ್ಯವಸ್ಥೆ ಮಾಡಿಸಿಕೊಡಿ ಎನ್ನುತ್ತಿದ್ದರು. ಇನ್ನೊಂದು ಕಡೆ ಒಬ್ಬರಿಗೆ ಇಂಜಿನಿಯರಿಂಗ್ ಸೀಟ್ ಸಿಕ್ಕಿದೆ. ಆದರೆ ಫೀಸ್ ಕಟ್ಟುವಂಥ ಸ್ಥಿತಿಯಲ್ಲಿ ಇಲ್ಲದಿರುವುದರಿಂದ ದಯವಿಟ್ಟು ಫೈನಾನ್ಸ್ ಕಂಪನಿಯಿಂದ ನಾವು ಕಟ್ಟಿರುವ ಹಣವನ್ನು ವಾಪಸ್ಸು ಕೊಡಿಸುವಂಥ ವ್ಯವಸ್ಥೆ ಮಾಡಿಕೊಡಿ ಎನ್ನುತ್ತಿದ್ದರು. ಈ ರೀತಿಯಲ್ಲಿ ಹಾಗೂ ಬೇರೆ ಬೇರೆ ರೀತಿಯಲ್ಲಿ ಹಣದ ಅವಶ್ಯಕತೆ ಬಗ್ಗೆ ಆಕ್ರಂಧನ ಕೇಳಿಬರುತ್ತಿದೆ. ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ನನ್ನ ವಿನಂತಿಯೆಂದರೆ ಇಂಥ ಅಸಹಾಯಕರ ನೆರವಿಗೆ ತಕ್ಷಣ ಸರ್ಕಾರ ಮುಂದೆ ಬರಬೇಕು. ಯಾವುದೇ ರೀತಿಯಲ್ಲೂ ಅವರಿಗೆ ಶೋಷಣೆ ಆಗದ ಹಾಗೆ ವ್ಯವಸ್ಥೆಯನ್ನು ಮಾಡಬೇಕು. ಇಷ್ಟು ಮಾತ್ರವಲ್ಲ. ಇನ್ನು ಮುಂದೆ ಡೆಪಾಸಿಟ್‌ಗಳನ್ನು ಪಡೆದುಕೊಳ್ಳುವ ಕಂಪನಿಗಳಿಗೆ ಕನಿಷ್ಟ ಮುಂದಿನ ದಿನಗಳಲ್ಲಿ ಅಸಲು ಹಣವಾದರೂ ಬರುವಂಥ ನಿಟ್ಟಿನಲ್ಲಿ ಇನ್‌ಶೂರೆನ್ಸ್ ಕವರೇಜ್ ಒಳಗೆ ಇದನ್ನು ತರುವುದಕ್ಕೆ ಸಾಧ್ಯವೇ ಎಂಬ ಬಗ್ಗೆ ತಾವು ಯೋಚಿಸಬೇಕೆಂದು ನಾನು ಹೇಳಬಯಸುತ್ತೇನೆ. ಇದರ ಜೊತೆಯಲ್ಲಿ ವಿಶೇಷವಾಗಿ ಕೋರ್ಟಿನ ಸಣ್ಣ ಪುಟ್ಟ ಆರ್ಡರ್‌ಗಳನ್ನು ಹಿಡಿದುಕೊಂಡು ಅದನ್ನೇ ಶೀಲ್ಡ್ ಆಗಿ ಮಾಡಿಕೊಂಡು ಜನರನ್ನು ಇನ್ನೂ ಶೋಷಣೆ ಮಾಡುತ್ತಿದ್ದಾರೆ. ಆದಕಾರಣ ಠೇವಣಿದಾರರ ನೆರವಿಗೆ ತಾವು ಬಂದು ಅವರ ಪರವಾಗಿ ಸರ್ಕಾರವೇ ಮುಂದೆ ಬಂದು ಕೋರ್ಟ್‌ನಲ್ಲಿ ವಾದಿಸಿ ಅವರಿಗೆ ಯಾವುದೇ ರೀತಿಯಲ್ಲಿ ರಕ್ಷಣೆಯನ್ನು ಕೊಡಬೇಕು. ಅಸಲನ್ನು ಆದರೂ ಕೊಡಿಸುವಂಥ ನಿಟ್ಟಿನಲ್ಲಿ ತಾವು ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ಸರ್ಕಾರ ಇದಕ್ಕೆ ತಕ್ಷಣ ಸ್ಪಂದಿಸಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ತತ್‌ಕ್ಷಣದಲ್ಲಿ ಇದಕ್ಕೆ ನನ್ನ ಹತ್ತಿರ ಉತ್ತರವಿಲ್ಲ.

ಆದರೆ ನನ್ನ ಇತಿಮಿತಿಯಲ್ಲಿ ಹೇಳುವುದಾದರೆ ಈ ಬ್ಲೇಡ್ ಕಂಪನಿಗಳು ಎಲ್ಲಾ ಕಡೆಗೂ ಹೆಚ್ಚಾಗುತ್ತದೆ. ಇವುಗಳ ಬಗ್ಗೆ ಜನರೂ ಕೂಡ ಬಹಳ ಜಾಗೃತರಾಗಿರಬೇಕು. ತತ್‌ಕ್ಷಣದಲ್ಲಿಯೇ ನಿಮಗೆ ಹಣ ಹೆಚ್ಚು ಕೊಡುತ್ತೇವೆ. ಬಡ್ಡಿ ಹೆಚ್ಚು ಕೊಡುತ್ತೇವೆ. ಅವ್ಯವಹಾರಿಕವಾಗಿರತಕ್ಕಂಥ ಒಂದು ಪ್ರಲೋಬಗಳನ್ನು ಒಡ್ಡಿದಾಗ ಅಂಥ ಪ್ರಲೋಭಗಳಿಗೆ ಪದೇ ಪದೇ ಬೀಳತಕ್ಕಂಥದ್ದು ಕೂಡ ಸರಿಯಾದುದಲ್ಲ. ಈ ಬಗ್ಗೆ ಪತ್ರಿಕೆಗಳವರೂ ಕೂಡ ವ್ಯಾಪಕವಾಗಿ ಮುಖಪುಟಗಳಲ್ಲಿ ಲೇಖನಗಳನ್ನು ಬರೆದಿದ್ದಾರೆ. ವರದಿಯನ್ನು ಮಾಡಿದ್ದಾರೆ. ಓದಿಲ್ಲದೇ ಇರುವವರು ಮತ್ತು ಓದಿದವರೂ ಕೂಡ ಬಹಳ ಸಾರಿ ಇಂಥ ಪ್ರಲೋಬಗಳಿಗೆ ಒಳಗಾಗುತ್ತಾರೆ. ತಾವು ಹೇಳಿದಂತೆ ಅಮಾಯಕರು ಇದರಲ್ಲಿ ಬಹಳ ಹಣವನ್ನು ಕಳೆದುಕೊಳ್ಳುತ್ತಿದ್ದಾರೆ. ಸರ್ಕಾರ ಕೂಡ ಇಂಥ ಬ್ಲೇಡ್ ಕಂಪನಿಗಳನ್ನು ಪ್ರತಿಬಂಧಿಸಬೇಕಾಗುತ್ತದೆ. ತಾವು ಹೇಳಿದಂಥ ರೀತಿಯಲ್ಲಿ ಏನಾದರೂ ತಾಂತ್ರಿಕ ಕಾರಣದಿಂದ ಹೈಕೋರ್ಟ್‌ನವರು ಅಥವಾ ಬೇರೆ ಕೋರ್ಟ್‌ನವರು ಇಂಥ ಒಂದು ತಡೆಯಾಜ್ಞೆಯನ್ನು ಕೊಟ್ಟಿದ್ದರೆ ಅದನ್ನು ತೆರವುಗೊಳಿಸುವ ನಿಟ್ಟಿನಲ್ಲಿ ನಾವು ಹೆಚ್ಚು ಗಮನ ಕೊಡುತ್ತೇವೆ. ಇಂಥ ವಿಷಯ ಗೊತ್ತಾದ ತಕ್ಷಣ ಆ ಬಡಾವಣೆಯಲ್ಲಿರುವಂಥ ಸ್ವಯಂ ಸೇವಾ ಕಾರ್ಯಕರ್ತರಾಗಿರಬಹುದು. ಅಥವಾ ಜನಸೇವಕರು ಆಗಬಹುದು. ಅವರು ಅಲ್ಲಿಯ ಪೊಲೀಸ್ ಕಛೇರಿಗೆ ಹೋಗಿ ಇಂಥ ಒಂದು ಅವ್ಯವಹಾರದ ಪ್ರಾಥಮಿಕ ಸುಳಿವು ಸಿಕ್ಕ ತಕ್ಷಣವೇ ಮಾಹಿತಿಯನ್ನು ಕೊಟ್ಟರೆ ಬಹುತೇಕವಾಗಿ ಇಂಥವನ್ನು ತಡೆಹಿಡಿಯಬಹುದು ಎಂದು ಹೇಳುತ್ತಾ ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ಇಲಾಖೆಯ ಅಧಿಕಾರಿಗಳ ಜೊತೆ ಮಾತನಾಡಿ ನಿರ್ದೇಶನವನ್ನು ಕೊಡಿಸುತ್ತೇನೆ.

ಅಧ್ಯಕ್ಷರು : ಈಗ ಗಮನ ಸೆಳೆಯುವ ಸೂಚನೆಗಳು. ಮೊದಲಿಗೆ ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡುರವರು ಗಮನ ಸೆಳೆಯಬೇಕು.

3. ಗಮನ ಸೆಳೆಯುವ ಸೂಚನೆಗಳು

ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು(ಶಿವಾಜಿನಗರ) : ಮಾನ್ಯ ಅಧ್ಯಕ್ಷರೆ, **ಬೆಂಗಳೂರು ನಗರದಲ್ಲಿ ಇತ್ತೀಚೆಗೆ ಬಿದ್ದ ಭಾರಿ ಮಳೆಯಿಂದ ಉಂಟಾಗಿರುವ ಸಾವು ನೋವು ರಸ್ತೆಗಳ ದುರಸ್ತಿ ಮತ್ತು ವಾಹನ ಸಂಚಾರಕ್ಕೆ ಉಂಟಾಗಿರುವ ತೊಂದರೆಯ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ**

†ಶ್ರೀ ಎ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಯವರ ಪರವಾಗಿ) : ತಮ್ಮ ಅಪ್ಪಣೆ ಪಡೆದು ಈ ಕೆಳಕಂಡ ಉತ್ತರವನ್ನು ನೀಡ ಬಯಸುತ್ತೇನೆ. 225 ಚ.ಕಿ.ಮೀ. ವಿಸ್ತೀರ್ಣ ನಗರ ಪ್ರದೇಶದಲ್ಲಿ ಬೀಳುವ ಮಳೆಯ ನೀರು, ಉಂಟಾಗುವ ಅಡೆತಡೆಗಳನ್ನು ನಿವಾರಿಸಿಕೊಂಡು ನಗರದ ಉದ್ದ ಅಗಲಕ್ಕೂ ಇರುವ ನಾಲ್ಕು ಪ್ರಮುಖ ಕಣಿವೆಗಳಿಗೆ ಸೇರುತ್ತದೆ. ಮಳೆಗಾಲದಲ್ಲಿ ಮೋರಿಗಳು ಮಣ್ಣು, ಕಸಕಡ್ಡಿಗಳು, ತ್ಯಾಜ್ಯ ವಸ್ತುಗಳು ಹಳೆಯ ಅಪಾಯಕರ ಹಂತದಲ್ಲಿರುವ ಗೋಡೆಗಳು/ ಕಟ್ಟಡಗಳು,